ದಿನಾಂಕ 24-04-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಅರ್ಜಿದಾರರ ಪರ ವಕೀಲರಿಂದಃ-**

14. ನನ್ನ ವಿದ್ಯಾಭ್ಯಾಸ ಐಟಿಐ. ಸರ್ಕಾರಿ ನೌಕರರು ನಿವೃತ್ತಿ ಹೊಂದಿದ ನಂತರ ಅವರಿಗೆ ಪ್ರತಿ ತಿಂಗಳು ಪಿಂಚಣಿ ಬರುತ್ತದೆ ಎಂದರೆ ಸರಿ. ನಿಮ್ಮ ತಂದೆಯವರು ಏನೆಂದು ಕೆಲಸ ಮಾಡುತ್ತಿದ್ದರು ಎಂದರೆ ಸಾಕ್ಷಿಯು ಪ್ರೌಢಶಾಲೆ ಶಿಕ್ಷಕರು ಇದ್ದರು ಎನ್ನುತ್ತಾರೆ. ಅವರಿಗೆ ಈಗ ಪಿಂಚಣಿ ಹಣ ಎಷ್ಟು ಬರುತ್ತಿದೆ ಎಂದು ನನಗೆ ಗೊತ್ತಿಲ್ಲ.

15. ನಾನು ಟೆಲಿಕಾಂ ಕಂಪನಿಯಲ್ಲಿ ಸರ್ವೀಸ್ ಇಂಜಿನಿಯರ್ ಎಂದು ಕೆಲಸ ಮಾಡುತ್ತಿದ್ದೆ. ಅದು ಯಾವ ಕಂಪನಿ ಎಂದರೆ ಸಾಕ್ಷಿಯು ಇಂಟಲೆಕ್ಸ್ ಎನ್ನುತ್ತಾರೆ. ನೀವು ಯಾವ ಯಾವ ಕಂಪನಿಗಳಿಗೆ ಸರ್ವೀಸ್ ಕೊಡುತ್ತೀರಿ ಎಂದರೆ ಸಾಕ್ಷಿಯು ಏರ್‌ಟೆಲ್, ವೊಡಾಫೋನ್, ಬಿ ಎಸ್ ಎನ್ ಎಲ್ & ಯಾವ ಯಾವ ಕಂಪನಿಗಳಲ್ಲಿ ನಮ್ಮ ಪ್ರಾಡಕ್ಟ್ ಇರುತ್ತದೆಯೋ ಅವರಿಗೆ ಸರ್ವೀಸ್ ಕೊಡುತ್ತೇವೆ ಎನ್ನುತ್ತಾರೆ. ಅವು ಎಂತಹ ಪ್ರಾಡಕ್ಟ್‌ಗಳು ಎಂದರೆ ಸಾಕ್ಷಿಯು ಎಲೆಕ್ಟ್ರಿಕಲ್ ಪ್ಯಾನಲ್‌ಗಳು ಎನ್ನುತ್ತಾರೆ.

16. ನಾನು ಈ ಹಿಂದೆ ಆದಾಯ ತೆರಿಗೆ ಪಾವತಿ ಮಾಡಿಲ್ಲ. ನನ್ನದು ಐಡಿಬಿಐ, ಎಸ್ ಬಿ ಐ & ಯೂನಿಯನ್ ಬ್ಯಾಂಕಿನಲ್ಲಿ ಖಾತೆಗಳು ಇವೆ. ಅವುಗಳ ಖಾತಾ ಸಂಖ್ಯೆಗಳನ್ನು ಹೇಳಲು ಆಗುವುದಿಲ್ಲ.

17. ನಿಮ್ಮ ಮೇಲೆ ಜೀವನಾಂಶದ ಪ್ರಕರಣಗಳು ಮಸ್ಕಿ ನ್ಯಾಯಾಲಯದಲ್ಲಿ ನಡೆಯುತ್ತಿವೆ ಎಂದರೆ ಸರಿ. ಒಟ್ಟು 2 ಪ್ರಕರಣಗಳು ನಡೆಯುತ್ತಿವೆ. ಆ ಕೇಸುಗಳಿಗೆ ನೀವು ಪ್ರತಿ ಮುದ್ದತ್ತಿಗೂ ಹೋಗುತ್ತಿರುತ್ತೀರಿ ಎಂದರೆ ಸಾಕ್ಷಿಯು ಮೊದಲು ಹೋಗುತ್ತಿದ್ದೆ, ಇತ್ತೀಚೆಗೆ ಆರೋಗ್ಯದ ಸಮಸ್ಯೆ ಇರುವುದರಿಂದ ಹೋಗುತ್ತಿಲ್ಲ ಎನ್ನುತ್ತಾರೆ.

18. ನಿಮ್ಮ ಹೆಂಡತಿ ನಿಮ್ಮೊಂದಿಗೆ ಸಂಸಾರ ನಡೆಸಲು ಬರುವುದಾದರೆ ನಿಮ್ಮ ಅಭಿಪ್ರಾಯ ಏನು ಎಂದರೆ ಸಾಕ್ಷಿಯು ಬರಬಹುದು ಎನ್ನುತ್ತಾರೆ.

19. ನ್ಯಾಯಾಲಯದಲ್ಲಿ ಪ್ರಕರಣಗಳು ಆದ ನಂತರ ಮಾತನಾಡಿರುವುದಿಲ್ಲ, ಆದರೆ ಒಂದು ಬಾರಿ ಮಸ್ಕಿ ನ್ಯಾಯಾಲಯದಲ್ಲಿ ರಾಜಿಗೋಸ್ಕರ ಮಾತನಾಡಿದಾಗ ಅರ್ಜಿದಾರರು ಡಿವೋರ್ಸ್ ಕೊಡುತ್ತೇನೆ ಎಂದು ಹೇಳಿದ್ದರು ಎನ್ನುತ್ತಾರೆ.

20. ನನ್ನ ಪ್ರತಿ ತಿಂಗಳ ಸಂಬಳ ರೂ.16,000/-.

**ಮರು ವಿಚಾರಣೆ ಇಲ್ಲಃ-**

ಆರ್ ಡಬ್ಲ್ಯೂ: 1 ಸಿ.ಸಿ ನಂ.2675/2021

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.,ಸಿಂಧನೂರು.